# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಜ್ಯದಲ್ಲಿನ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ನಿಗದಿತ ಕಾರ್ಯಭಾರವಿಲ್ಲದ ದಿನಾಂಕ 15-2-2005ರ ಪೂರ್ವದಲ್ಲಿ ಉಂಟಾದ ಹೆಚ್ಚುವರಿ ಶಿಕ್ಷಕರ ಕುರಿತು.

**ಓದಲಾಗಿದೆ:-** (1) ದಿನಾಂಕ 1-6-1999ರ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 112 ಪಿಎಂಸಿ 99.

(2) ದಿನಾಂಕ 16-11-1999ರ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 112 ಪಿಎಂಸಿ 99.

(3) ದಿನಾಂಕ 3-3-2000ದ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 200 ಪಿಎಂಸಿ 99.

-0-

1. ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಕರಣಗಳಲ್ಲಿ ಉಂಟಾದ ಅಕ್ರಮಗಳು 1999ನೇ ಸಾಲಿನಲ್ಲಿ ಸರ್ಕಾರದ ಗಮನಕ್ಕೆ ಬಂದವು. ಅದರಲ್ಲಿ ಈ ಕೆಳಗೆ ಉದಾಹರಿಸಿದ ಅಕ್ರಮಗಳು ಒಳಗೊಂಡಿದ್ದವು :-

(1) ನಿಗದಿತ ಅನುಪಾತ ಅಂದರೆ, 40:1ರ ಅನುಪಾತದಂತೆ ವಿದ್ಯಾರ್ಥಿಗಳ ಸಂಖ್ಯಾ ಬಲ ಇಲ್ಲದೇ ಇರುವುದು;
(2) ವಿದ್ಯಾರ್ಥಿಗಳ ಸಂಖ್ಯಾ ಬಲ ಸಾಕಷ್ಟು ಇಲ್ಲದೇ ಇದ್ದರೂ, ಸ್ವಾಭಾವಿಕ ಬೆಳವಣಿಗೆಯ ನೆಪದಲ್ಲಿ ಹೆಚ್ಚುವರಿ ವಿಭಾಗಗಳನ್ನು ತೆರೆದಿರುವುದು;
(3) ನಿಗದಿತ ಮೂಲಭೂತ ಸೌಕರ್ಯಗಳನ್ನು ಆಯಾಯಾ ಆಡಳಿತ ಮಂಡಳಿ ಒದಗಿಸದೇ ಇರುವುದು;
(4) ಮೀಸಲಾತಿ ರೋಸ್ಟರ್ ಅನ್ನು ಪಾಲಿಸದೇ ನೇಮಕಾತಿಗಳನ್ನು ಮಾಡಿರುವುದು;

ಈ ಪ್ರಕರಣಗಳ ಗಂಭೀರತೆ ಮತ್ತು ಆಗಾಧತೆಯನ್ನು ಪರಿಗಣಿಸಿ, ಸರ್ಕಾರ, ಮೇಲೆ (1)ರಲ್ಲಿ ಓದಲಾದ ದಿನಾಂಕ 1-6-99ರ ಸುತ್ತೋಲೆಯನ್ವಯ ಸೂಚನೆಗಳನ್ನು

SO PRI-A

ನೀಡಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರುಗಳು ಅವರವರ ಜಿಲ್ಲೆಯ ವ್ಯಾಪ್ತಿಯಲ್ಲಿನ ಎಲ್ಲಾ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ತನಿಖೆ ನಡೆಸಿ, ಮೇಲೆ ಉಲ್ಲೇಖಿಸಿದ ನಿಗದಿತ ಅನುಪಾತಕ್ಕೆ ಅನುಗುಣವಾಗಿ ನೇಮಕಾತಿಗೊಂಡಿಲ್ಲದ (ಹೆಚ್ಚುವರಿ) ಶಿಕ್ಷಕರುಗಳನ್ನು ಗುರುತಿಸಿ, ಅವರ ವೇತನವನ್ನು ತಡೆಹಿಡಿಯುವಂತೆ ಇತ್ಯಾದಿ ಸೂಚನೆಗಳನ್ನು ಅದರನ್ವಯ ನೀಡಲಾಯಿತು. ಮುಂದುವರೆದು, ದಿನಾಂಕ 11-11-1999ರಂದು ನಡೆದ ಉಪ ನಿರ್ದೇಶಕರುಗಳ ಸಭೆಯಲ್ಲಿ ಈ ವಿಚಾರವನ್ನು ಚರ್ಚಿಸಲಾಯಿತು ಹಾಗೂ ಈ ವಿಷಯದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳ ಕಾರ್ಯಸೂಚಿಯನ್ನೂ ಸಹ ನಿಗದಿಪಡಿಸಲಾಯಿತು. ಮೇಲ್ಕಂಡ ತನಿಖೆ/ತಪಾಸಣೆಯ ಕ್ರಮಗಳಿಂದ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳ ಜಿಲ್ಲಾವಾರು ಪ್ರಕರಣಗಳನ್ನು ಗುರುತಿಸಲಾಯಿತು. ಈ ಸಂಬಂಧದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ: 3547/97 ಹಾಗೂ ಸಂಬಂಧಿಸಿದ ಪ್ರಕರಣಗಳಲ್ಲಿ ದಿನಾಂಕ 9-12-1999ರಂದು ತೀರ್ಪನ್ನು ನೀಡಿ, ಈ ಕೆಳಕಂಡಂತೆ ನಿರ್ದೇಶನ ನೀಡಿತು :-

"The respondent-state shall on the basis of inspections conducted pursuant to its circular dated 1-6-99 identify aided private educational institutions which do not possess the minimum infrastructural facilities prescribed for such institutions in terms of the GIA code and the rules framed under the Education Act and initiate proceedings under Section 53 of the ACT for withdrawal of aid to such institutions. It may consider appointing a special task force in this regard to expedite inspections, verifications, tabulation of data and evaluation of facilities and deficiencies reported in such institutions. The needful shall be done expeditiously and as far as possible within a period of six months from today."

2. ಈ ಹಿನ್ನೆಲೆಯಲ್ಲಿ, ಮೇಲೆ (3)ರಲ್ಲಿ ಓದಲಾದ ದಿನಾಂಕ 3-2-2000ದ ಸುತ್ತೋಲೆಯನ್ನು ಹೊರಡಿಸಿ, ಈ ವಿಚಾರದಲ್ಲಿ ಸಕ್ಷಮ ಪ್ರಾಧಿಕಾರಗಳು ತೆಗೆದುಕೊಳ್ಳಬೇಕಾದ ಮುಂದಿನ ಕ್ರಮಗಳನ್ನು ವಿವರಿಸಲಾಯಿತು. ಅದರಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿದ್ದವು :-

(1) ನಿಗದಿತ ಅನುಪಾತದ ಅನುಗುಣವಾಗಿ ಸಾಕಷ್ಟು ವಿದ್ಯಾರ್ಥಿಗಳು ಇರುವ ಶಾಲೆಗಳಲ್ಲಿನ ಶಿಕ್ಷಕರುಗಳಿಗೆ (ಅವರಿಗೆ ಅನುದಾನದ ಬಿಡುಗಡೆಗೆ

ಸಂಬಂಧಿಸಿದಂತೆ) ತೊಂದರೆ ಆಗದಂತೆ ಮತ್ತು ಅಂತಹ ಶಾಲೆಗಳನ್ನು ಮುಚ್ಚದಂತೆ ನೋಡಿಕೊಳ್ಳುವುದು;

(2) ಸದರಿ ಅನುಪಾತಕ್ಕಿಂತ ಕಡಿಮೆ ವಿದ್ಯಾರ್ಥಿಗಳ ಸಂಖ್ಯಾ ಬಲವಿದ್ದು, ಸಾಕಷ್ಟು ಕಾರ್ಯಭಾರವಿಲ್ಲದ ಹೆಚ್ಚುವರಿ ಶಿಕ್ಷಕರುಗಳನ್ನು ಗುರುತಿಸುವುದು;

(3) ಅಂತಹ ಹೆಚ್ಚುವರಿ ಶಿಕ್ಷಕರುಗಳನ್ನು ಆಯಾಯಾ ಆಡಳಿತ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಇತರೆ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲೇ ಸರಿದೂಗಿಸಿ ಹಂಚಿಕೆ ಮಾಡುವುದು;

(4) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಅಂತಹ ಹೆಚ್ಚುವರಿ ಶಿಕ್ಷಕರುಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸುವುದು ಹಾಗೂ ಅವರುಗಳನ್ನು ರಾಜ್ಯದ ಇತರೆ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ರಿಕ್ತ ಸ್ಥಾನಗಳಿಗೆ ಕೌನ್ಸಿಲಿಂಗ್ ಮೂಲಕ ಹಂಚಿಕೆ ಮಾಡುವುದು.

3. ಕಂಡಿಕೆ-2ರಲ್ಲಿ ಉಲ್ಲೇಖಿಸಿದ ದಿನಾಂಕ 3-2-2000ದ ಸೂಚನೆಗಳನ್ವಯ ಕ್ರಮ ತೆಗೆದುಕೊಂಡು ಸದರಿ ಹೆಚ್ಚುವರಿ ಶಿಕ್ಷಕರುಗಳನ್ನು ಕೌನ್ಸಿಲಿಂಗ್ ಮೂಲಕ ರಾಜ್ಯದ ಇತರೆ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ರಿಕ್ತ ಸ್ಥಾನಗಳಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಯಿತು. ತದ ನಂತರ, ಆರ್ಥಿಕ ಇಲಾಖೆಯ ದಿನಾಂಕ 12-1-2004ರ ಆದೇಶ ಸಂಖ್ಯೆ: ಎಫ್‌ಡಿ 2 ಬಿಇಎಂ 2003, ದಿನಾಂಕ 17-1-2004ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2004 ಮತ್ತು ತದನಂತರದ ದಿನಾಂಕ 5-7-2004ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 2 ಬಿಇಎಂ 2003 ಈ ಮಿತವ್ಯಯ ಆದೇಶಗಳ ಹಿನ್ನೆಲೆಯಲ್ಲಿ ಹಂಚಿಕೆ ಮುಂದುವ ಸದರಿ ಕ್ರಮವನ್ನು ಸ್ಥಗಿತಗೊಳಿಸಲಾಯಿತು.

4. ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 98 ಮತ್ತು 99ರ ಪ್ರಕಾರ, ಅದನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳು) ನಿಯಮಗಳು, 1999ರ ನಿಯಮ 10 ಮತ್ತು 11ರೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ಕ್ರಮ ತೆಗೆದುಕೊಂಡು ಹೆಚ್ಚುವರಿ ಶಿಕ್ಷಕರನ್ನು ರಿಟ್ರೆಂಚ್ ಮಾಡಿ ಅವರ ಅನುದಾನವನ್ನು ನಿಲ್ಲಿಸಿ, ರಿಟ್ರೆಂಚ್ ಆದವರ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ನಿರ್ವಹಿಸಿಕೊಂಡು, ಗಣಕೀಕೃತ

SO FRI-7

ಕೌನ್ಸಿಲಿಂಗ್ (computerized counseling) ಮೂಲಕ ಜೇಷ್ಠತೆಯ ಆಧಾರದ ಮೇಲೆ ಅವರುಗಳನ್ನು ರಿಕ್ತಸ್ಥಾನಗಳು (ಕಾರ್ಯಭಾರ) ಲಭ್ಯವಿರುವ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಆಸ್ಪದ ಇರುತ್ತದೆ. ಮೇಲೆ ಉಲ್ಲೇಖಿಸಿದ ನಿಯಮ 11ರ ಉಪ ನಿಯಮ (1) ಈ ಕೆಳಕಂಡಂತೆ ಇರುತ್ತದೆ :-

> "11. Procedure to be followed by Competent Authority under Section 98:- (1) The Competent Authority may either suo motu after personally ascertaining facts or on the report of one of the subordinate officers initiate action to retrench an employee by following as far as may be, the procedure under rule 10 and pass an order giving necessary directions to the Governing Council after having fully satisfied that retrenchment is called for due to any one or more of the reasons specified in rule 10 or section 98."

ಅಂತಹ ಶಿಕ್ಷಕರನ್ನು ಸೇವೆಯಿಂದ ಟರ್ಮಿನೇಟ್ (terminate) ಮಾಡಲು ಸಹ ಸೆಕ್ಷನ್ 99 ರನ್ವಯ ಆಸ್ಪದ ಇರುತ್ತದೆ. ಆದರೂ ಮಾನವೀಯತೆಯ ದೃಷ್ಟಿಯಿಂದ ಹಾಗೂ ದಿನಾಂಕ 15-2-2005ರ ಪೂರ್ವದಲ್ಲಿ, ಉಂಟಾದ, ಬಹು ಸಂಖ್ಯೆಯಲ್ಲಿರುವ (2000ಕ್ಕೂ ಮೇಲ್ಪಟ್ಟ) ಸದರಿ ಹೆಚ್ಚುವರಿ ಶಿಕ್ಷಕರು ಮತ್ತು ಅವರ ಕುಟುಂಬಗಳಿಗೆ ಆಗಬಹುದಾದ ಆರ್ಥಿಕ ಮುಗ್ಗಟ್ಟನ್ನು ನಿವಾರಿಸಲು, ಒಂದು ಬಾರಿಯ ಕ್ರಮವಾಗಿ, ಸೂಕ್ತ ವ್ಯವಸ್ಥೆಯನ್ನು ಮಾಡುವ ಕುರಿತು ಸರ್ಕಾರ ಪರಿಶೀಲಿಸಿ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ-1ರಲ್ಲಿ ಒಳಗೊಂಡ ಒಂದು ಯೋಜನೆಯನ್ನು ತಯಾರಿಸಿ ಈ ಮೂಲಕ ನಿಗದಿಪಡಿಸಿದೆ.

6. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

*ಸರ್ಕಾರದ ಆದೇಶ ಸಂಖ್ಯೆ: ಇಡಿ 200 ಪಿಎಂಸಿ 99,*
*ಬೆಂಗಳೂರು, ದಿನಾಂಕ 09-06-2005.*

7. ಕಂಡಿಕೆ-5ರಲ್ಲಿ ಉಲ್ಲೇಖಿಸಿದ, ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ-1ರಲ್ಲಿ ಒಳಗೊಂಡ ಯೋಜನೆಯನ್ನು ಸರ್ಕಾರ ಈ ಮೂಲಕ ನಿಗದಿಪಡಿಸಿದೆ. ಈ ಯೋಜನೆಯು ಎರಡು ಶೈಕ್ಷಣಿಕ ವರ್ಷಗಳ ಅವಧಿಗೆ ಮಾತ್ರ, ಅಂದರೆ, 2005-06 ಮತ್ತು 2006-07, ಈ ಎರಡು ವರ್ಷಗಳ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ. ಆದುದರಿಂದ, ಅನುಬಂಧ-1ರ ಕಂಡಿಕೆ- 2.3, 2.4, 3.2

ಮತ್ತು ಕಂಡಿಕೆ-4 ಗಳನ್ವಯ ವಿಧಿಸಿದ ಕಾಲಮಿತಿಗಳ ಒಳಗೆ ನಿಗದಿತ ಕ್ರಮಗಳನ್ನು ಪೂರೈಸಿ, ಅನುಬಂಧ-1ರಲ್ಲಿನ ಯೋಜನೆಯನ್ನು ಜಾರಿಗೊಳಿಸತಕ್ಕದ್ದು. ಸದರಿ ಕ್ರಮಗಳನ್ನು ಮತ್ತು ಕಾಲಮಿತಿಗಳನ್ನು ಈ ಕೆಳಕಂಡ ಪಟ್ಟಿಯಲ್ಲಿಯೂ ಸಹ ಉಲ್ಲೇಖಿಸಲಾಗಿದೆ :-

| ಕ್ರಮ ಸಂಖ್ಯೆ | ಕ್ರಮ | ಕಾಲ ಮಿತಿ |
|---|---|---|
| (1) | (2) | (3) |
| 1) | ಅನುಬಂಧ-1ರ ಕಂಡಿಕೆ-2.1, 2.2. ಮತ್ತು 2.3ರಲ್ಲಿ ಉಲ್ಲೇಖಿಸಿದ ಕ್ರಮ. ಅಂದರೆ, ಅಲ್ಪ ಸಂಖ್ಯಾತರ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸದರಿ ಹೆಚ್ಚುವರಿ ಶಿಕ್ಷಕರುಗಳನ್ನು ತಾತ್ಕಾಲಿಕವಾಗಿ ಒಪ್ಪಂದದ ಆಧಾರದ ಮೇಲೆ ನೀಡುವ ಕ್ರಮ. | 30-07-2005 |
| 2) | ಅನುಬಂಧ-1ರ ಕಂಡಿಕೆ-2.4 ಮತ್ತು 2.5ರಲ್ಲಿ ಉಲ್ಲೇಖಿಸಿದ ಕ್ರಮ ಅಂದರೆ, ಅಲ್ಪ ಸಂಖ್ಯಾತರಲ್ಲದ (non-minority) ಸಾಮಾನ್ಯ ವರ್ಗದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ತಕ್ಷಣಕ್ಕೆ ಲಭ್ಯವಿರುವ ರಿಕ್ತ ಸ್ಥಾನಗಳಿಗೆ ಸದರಿ ಹೆಚ್ಚುವರಿ ಶಿಕ್ಷಕರುಗಳನ್ನು (ಶಾಶ್ವತವಾಗಿ) ಹಂಚಿಕೆ ಮಾಡುವ ಕ್ರಮ. | 30-07-2005 |
| 3) | ಅನುಬಂಧ-1ರ ಕಂಡಿಕೆ 3 ರಿಂದ 3.2ರಲ್ಲಿ ಉಲ್ಲೇಖಿಸಿದ ಕ್ರಮ. ಅಂದರೆ, ಈ ಪಟ್ಟಿಯ ಕ್ರಮ ಸಂಖ್ಯೆ (1) ಮತ್ತು (2)ರಂತೆ ಕ್ರಮ ತೆಗೆದುಕೊಂಡ ನಂತರ ಉಳಿದಿರುವ ಸದರಿ ಹೆಚ್ಚುವರಿ ಶಿಕ್ಷಕರುಗಳನ್ನು ಒಪ್ಪಂದದ ಆಧಾರದ ಮೇಲೆ ಲೀವ್ ರಿಸರ್ವ್ ಶಿಕ್ಷಕರುಗಳನ್ನಾಗಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ರಿಕ್ತ ಸ್ಥಾನಗಳಿಗೆ ತಾತ್ಕಾಲಿಕವಾಗಿ ಒಪ್ಪಂದದ ಆಧಾರದ ಮೇಲೆ ನೀಡುವ ಕ್ರಮ. | ದಿನಾಂಕ 01-08-2005ರಿಂದ 31-08-2005ರ ಅವಧಿಯಲ್ಲಿ. (ದಿನಾಂಕ 31-08-2005ರ ಒಳಗೆ) |

| | | |
|---|---|---|
| 4) | ಅನುಬಂಧ-1ರ ಕಂಡಿಕೆ-4 ಮತ್ತು 4.1ರಲ್ಲಿ ಉಲ್ಲೇಖಿಸಿದ ಕ್ರಮ. ಅಂದರೆ, ಈ ಪಟ್ಟಿಯ ಕ್ರಮ ಸಂಖ್ಯೆ (1) ಮತ್ತು (3)ರಲ್ಲಿ ಉಲ್ಲೇಖಿಸಲಾದ ಕ್ರಮಗಳು ತಾತ್ಕಾಲಿಕ ವ್ಯವಸ್ಥೆ (stop-gap arrangement) ಯಾಗಿದ್ದು, ಸದರಿ ಹೆಚ್ಚುವರಿ ಶಿಕ್ಷಕರುಗಳನ್ನು (ಕ್ರಮ ಸಂಖ್ಯೆ (2)ರಂತೆ ಶಾಶ್ವತವಾಗಿ ಹಂಚಿಕೆಯಾದ ಹೆಚ್ಚುವರಿ ಶಿಕ್ಷಕರುಗಳನ್ನು ಹೊರತುಪಡಿಸಿ), ಅಲ್ಪ ಸಂಖ್ಯಾತರಲ್ಲದ (non-minority) ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಶಾಶ್ವತವಾಗಿ ಹಂಚುವ ಕ್ರಮ. | ದಿನಾಂಕ 01-09-2005 ರಿಂದ 31-5-2007ರ ಅವಧಿಯಲ್ಲಿ (ದಿನಾಂಕ 31-5-2007ರ ಒಳಗೆ). |

ವಿಸ್ತರಿಸಲಾಗುವುದಿಲ್ಲ ಹಾಗೂ
ಯಾವುದೇ ಕಾರಣಕ್ಕಾಗಿ ಈ ಯೋಜನೆಯನ್ನು
ಒಪ್ಪಂದದ ಅವಧಿ ತಾನೇತಾನಾಗಿ
2006-07ನೇ ಶೈಕ್ಷಣಿಕ ವರ್ಷದ ನಂತರ
(automatically) ಮುಗಿಯುತ್ತದೆ. ಆ ಅವಧಿಯೊಳಗೆ ದಿನಾಂಕ 15-2-
2005ರ ಪೂರ್ವದಲ್ಲಿ ಉಂಟಾದ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ
ಹೆಚ್ಚುವರಿ ಶಿಕ್ಷಕರುಗಳನ್ನು ಅನುಬಂಧ-1ರ ಕಂಡಿಕೆ-4 ಮತ್ತು 4.1ರಂತೆ
ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ರಿಕ್ತ ಸ್ಥಾನಗಳಲ್ಲಿ, ದಿನಾಂಕ
31-5-2007ರೊಳಗೆ ಸರಿದೂಗಲಾಗದೇ ಉಳಿದಲ್ಲಿ, ಅವರುಗಳನ್ನು ಮೇಲೆ
ಉಲ್ಲೇಖಿಸಿದ ಸೆಕ್ಷನ್ 98 ಮತ್ತು 99ರ ಪ್ರಕಾರ, ಅದನ್ನು ಕರ್ನಾಟಕ ಶಿಕ್ಷಣ
ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ
ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು ಹಾಗೂ ನಿಬಂಧನೆಗಳು) ನಿಯಮ
ಗಳು, 1999, ಇವುಗಳ ಪ್ರಕಾರ ಸಕ್ಷಮ ಪ್ರಾಧಿಕಾರ ಕ್ರಮ ತೆಗೆದುಕೊಂಡು,
ರಿಟ್ರೆಂಚ್ ಮಾಡಿ ಅವರ ಸೇವೆಯನ್ನು ಟರ್ಮಿನೇಟ್ ಮಾಡತಕ್ಕದ್ದು.

15-2-2005ರ ಒಳಗೆ ಉಂಟಾದ
8. ಸದರಿ ಯೋಜನೆ ದಿನಾಂಕ
ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳಿಗೆ
ಮಾತ್ರ ಲಭ್ಯವಿರುತ್ತದೆ. ದಿನಾಂಕ 15-2-2005ರ ನಂತರ, ಹೆಚ್ಚುವರಿ ಶಿಕ್ಷಕರು
ಗಳು ಇಂದಿನವರೆಗೆ ಉಂಟಾಗಿದ್ದಲ್ಲಿ ಅಥವಾ ಭವಿಷ್ಯದಲ್ಲಿ ಉಂಟಾದಲ್ಲಿ
ಅವರ ಸೇವೆಯನ್ನು ಸದರಿ ಉಪಬಂಧಗಳನ್ವಯ, ಅಂದರೆ, ಕರ್ನಾಟಕ ಶಿಕ್ಷಣ
ಅಧಿನಿಯಮ, 1983ರ ಸೆಕ್ಷನ್ 98 ಮತ್ತು 99 ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆ

ಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳು) ನಿಯಮಗಳು, 1999ರ ನಿಯಮ 10 ಮತ್ತು 11ರಲ್ಲಿ ನಿಗದಿಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿ, ಸಕ್ಷಮ ಪ್ರಾಧಿಕಾರ ಅವರನ್ನು ರಿಟ್ರೆಂಚ್ ಮಾಡಿ ಸೇವೆಯಿಂದ ಟರ್ಮಿನೇಟ್ ಮಾಡತಕ್ಕದ್ದು.

9. ಅನುಬಂಧ-1ರಲ್ಲಿನ ಯೋಜನೆಯನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ, ಕಂಡಿಕೆ-3ರಲ್ಲಿ ಉಲ್ಲೇಖಿಸಲಾದ ಆರ್ಥಿಕ ಇಲಾಖೆ ಹೊರಡಿಸಿದ ಆದೇಶಗಳು ಹಾಗೂ ಕಾಲಕಾಲಕ್ಕೆ ಆರ್ಥಿಕ ಇಲಾಖೆ ಹೊರಡಿಸುವ ಮಿತವ್ಯಯ ಆದೇಶಗಳು ಅನ್ವಯಿಸುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
9.6.05
(ಬಿ.ಹೆಚ್.ಪಡಸಲಗಿ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
ಶಿಕ್ಷಣ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಸರ್ಕಾರದ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 1000 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ-ಎ ಶಾಖೆಗೆ ಒದಗಿಸಬೇಕೆಂದು ಕೋರಿದೆ.

ಪ್ರತಿ:

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
4) ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5) ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.

SO PRI-A